ಶ್ರೀ ಎಸ್. ಬಂಗಾರಪ್ಪ : ಒಬ್ಬ ವ್ಯಕ್ತಿ ಈ ರೀತಿ ಹೋರಾಟ ಮಾಡಿದ್ದರೆ ಚರಿತ್ರಾರ್ಹವಾದ ಗೌರವವಿರುತ್ತದೆ ಮತ್ತು ಅಂಥವರ ಪ್ರತಿಮೆ ಮಾಡಬಹುದು ಈ ರೀತಿ ಏನಾದರೂ ಇದ್ದರೆ ವಿವರಣೆಯನ್ನು ನೋಡಿ ಸರ್ಕಾರ ತೀರ್ಮಾನವನ್ನು ಮಾಡುತ್ತದೆ.

ಕೋಲಾರ ಮಂಡಲ ಪಂಚಾಯಿತಿಗೆ ಬರುವ 92 ಹಳ್ಳಿಗಳನ್ನು ಕೋಲಾರ ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿಸಿಕೊಂಡಿರುವ ಬಗ್ಗೆ

2606 - ಶ್ರೀ ಎಂ. ನಾರಾಯಣಸ್ವಾಮಿ ಪರವಾಗಿ ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೋಲಾರ ಮಂಡಲ ಪಂಚಾಯ್ತಿ ವ್ಯಾಪ್ತಿಗೆ ಬರುವ 92 ಹಳ್ಳಿಗಳನ್ನು ಕೋಲಾರ ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿಸಿಕೊಳ್ಳಲಾಗಿದೆಯೇ?

ಆ) ಹಾಗಿದ್ದಲ್ಲಿ ಈ ಹಳ್ಳಿಗಳನ್ನು ಎಂದಿನಿಂದ ಸೇರಿಸಿಕೊಳ್ಳಲಾಯಿತು ಮತ್ತು ಆ ಹಳ್ಳಿಗಳಾವುವು?

ಇ) ಈ ರೀತಿ ಹಳ್ಳಿಗಳನ್ನು ಸೇರಿಸಿಕೊಳ್ಳಲು ಕಾನೂನಿನಲ್ಲಿ ಅಧಿಕಾರವಿದೆಯೇ?

ಈ) ಈ ರೀತಿ ಹಳ್ಳಿಗಳನ್ನು ಸೇರಿಸಿಕೊಂಡಿರುವುದರಿಂದ ಆ ಹಳ್ಳಿಗಳಲ್ಲಿ ಯಾವ ಯಾವ ಸೌಕರ್ಯಗಳು ಕೆ.ಡಿ.ಎ.ದಿಂದ ಲಭ್ಯವಾಗುತ್ತದೆ.

ಶ್ರೀ ಕೆ.ಜೆ.ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಕರ್ನಾಟಕ ನಗರ ಅಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ 1987ರ ಪ್ರಕರಣ 2 (ಎಸ್)ರಂತೆ ಅಧಿಕಾರವಿದೆ.

ಈ) ನೀರು ಸರಬರಾಜು ನೈರ್ಮಲ್ಯ ಸಂಬಂಧವಾದ ಕಾಮಗಾರಿಗಳು ವಿದ್ಯುತ್ ಪೂರೈಕೆ ಮತ್ತು ಇತರೆ ಸೌಲಭ್ಯಗಳನ್ನೊಳಗೊಂಡ ಯೋಜಿತ ಬೆಳವಣಿಗೆ.

ಶ್ರೀ ಆರ್.ವಿ. ದೇಶಪಾಂಡೆ : ಅಧ್ಯಕ್ಷರೆ ಉತ್ತರದಲ್ಲಿ ಯಾವುದೇ ಗ್ರಾಮಗಳನ್ನು ಕೋಲಾರದ ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿಸಿಲ್ಲವೆಂದು ಹೇಳಿದ್ದಾರೆ. ಆದರೆ ಕೆಲವು ಹಳ್ಳಿಗಳನ್ನು ಸೇರಿಸಿದ್ದಾರೆ. ಆದರೆ ಅಲ್ಲಿ ಯಾವುದೇ ಅಭಿವೃದ್ಧಿಯಾಗುತ್ತಿಲ್ಲವೆಂದು ಮಾನ್ಯ ನಾರಾಯಣಸ್ವಾಮಿಯವರ ಒಂದು ದೂರು ಏನು ಇತ್ತೋ ಅದನ್ನು ಮಾನ್ಯ ಸಚಿವರು ಗಮನದಲ್ಲಿಟ್ಟುಕೊಂಡು ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಮುಳಬಾಗಿಲು ತಾಲ್ಲೂಕಿನ ಗುಂಪು ಘರ್ಷಣೆ

2719 - ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಅ) ಮುಳಬಾಗಿಲು ತಾಲ್ಲೂಕಿನಲ್ಲಿ 1990ನೇ ವರ್ಷದಲ್ಲಿ ನಡೆದ ಘರ್ಷಣೆಗಳ ಒಟ್ಟು ದಾಖಲಾಗಿರುವ ಮೊಕದ್ದಮೆಗಳೆಷ್ಟು?

ಆ) ಮಾನ್ಯ ಮುಖ್ಯ ಮಂತ್ರಿಗಳು ಲೋಕಸಭಾ ಚುನಾವಣೆ ಮುನ್ನಾ ಎಲ್ಲಾ ಮೊಕದ್ದಮೆಗಳನ್ನು ಹಿಂದಕ್ಕೆ ಪಡೆಯುವುದಾಗಿ ಆಶ್ವಾಸನೆ ಕೊಟ್ಟಿರುವ ಪ್ರಯುಕ್ತ

ಸದರಿ ಮೊಕದ್ದಮೆಗಳನ್ನು ವಾಪಸ್ಸು ಪಡೆಯಲು ಸರ್ಕಾರದವರು ಸೂಕ್ತ ಕಾರ್ಯಕ್ರಮ ಕೈಗೊಳ್ಳುವರೇ?

ಶ್ರೀ ಧರ್ಮಸಿಂಗ್ (ಗೃಹ ಸಚಿವರು) :

ಅ) 106

ಆ) ಸಚಿವಸಂಪುಟದ ತೀರ್ಮಾನದಂತೆ ಇಂತಹ ಮೊಕದ್ದಮೆಗಳನ್ನು ಹಿಂತೆಗೆದುಕೊಳ್ಳುವ ಬಗ್ಗೆ ನೇಮಿಸಲಾದ ಉನ್ನತ ಮಟ್ಟದ ಪರಿಶೀಲನಾ ಸಮಿತಿಯು ಪರಿಶೀಲನೆ ನಡೆಸುತ್ತಿದೆ. ಸರ್ಕಾರಕ್ಕೆ ಇವರ ಶಿಫಾರಸ್ಸು ಬಂದ ನಂತರ ಈ ಮೊಕದ್ದಮೆಗಳನ್ನು ವಾಪಸ್ಸು ಪಡೆಯಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಎಂ.ವಿ. ವೆಂಕಟಪ್ಪ : ಅಧ್ಯಕ್ಷರೆ ಉತ್ತರದಲ್ಲಿ ಸಚಿವಸಂಪುಟದ ತೀರ್ಮಾನದಂತೆ ಇಂತಹ ಮೊಕದ್ದಮೆಗಳನ್ನು ಹಿಂತೆಗೆದುಕೊಳ್ಳುವ ಬಗ್ಗೆ ನೇಮಿಸಲಾದ ಉನ್ನತ ಮಟ್ಟದ ಸಮಿತಿಯ ವರದಿ ಬಂದ ಮೇಲೆ ಮಾಡುತ್ತೇವೆಂದು ಹೇಳಿದ್ದಾರೆ. ನನಗೆ ಬಂದ ಮಾಹಿತಿಯ ಪ್ರಕಾರ ಅನೇಕ ಜನ ವಿದ್ಯಾರ್ಥಿಗಳು ಅಮಾಯಕರು ಯಾವುದೋ ಒಂದು ಆವೇಶದಿಂದ ಆ ರೀತಿ ಮಾಡಿರುತ್ತಾರೆ. ಆದಷ್ಟು ಬೇಗ ಆ ಮೊಕದ್ದಮೆಗಳನ್ನು ವಾಪಸ್ ತೆಗೆದುಕೊಳ್ಳಲು ವಿಪ್ಪಾಡುಗಳನ್ನು ಮಾಡಬೇಕು

ಶ್ರೀ ಧರ್ಮಸಿಂಗ್ : ಸನ್ಮಾನ್ಯ ಅಧ್ಯಕ್ಷರೆ ಎಲ್ಲೆಲ್ಲಿ ಈ ರೀತಿ ಗಲಭೆಗಳಾಗಿದೆಯೋ ಮತ್ತು ಎಲ್ಲೆಲ್ಲಿ ಈ ರೀತಿಯ ತೊಂದರೆಗಳಿಂದಾಗಿ ಕೇಸ್‌ಗಳನ್ನು ಹಾಕಿದ್ದಾರೋ ಅವುಗಳ ಬಗ್ಗೆ ಒಂದು ಕ್ಯಾಬಿನೆಟ್ ಸಬ್ ಕಮಿಟಿಯನ್ನು ರಚನೆ ಮಾಡಿದ್ದೇವೆ. ಡೈರೆಕ್ಟರ್ ಜನರಲ್ ಅವರಿಗೂ ಕೂಡ ಯಾವ್ಯಾವ ಹಂತದಲ್ಲಿ ಕೇಸ್‌ಗಳಿದೆಯೋ ಅದನ್ನು ವಾಪಸ್ ತೆಗೆದುಕೊಳ್ಳುವ ಬಗ್ಗೆ ಅವರಿಗೆ ವಹಿಸಿದ್ದೇವೆ. ಮುಳಬಾಗಿಲಿಗೆ ಸಂಬಂಧಪಟ್ಟ ಕೋಲಾರಕ್ಕೆ ಸಂಬಂಧಪಟ್ಟ ಮತ್ತು ಕರ್ನಾಟಕ ರಾಜ್ಯಕ್ಕೆ ಸಂಬಂಧಪಟ್ಟಂತೆ ಬೇರೆ ಬೇರೆ ಕೇಸುಗಳನ್ನು ಕೂಡ ಆದಷ್ಟು ಬೇಗ ವಾಪಸ್ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ.ವಿ. ವೆಂಕಟಪ್ಪ : ಅಧ್ಯಕ್ಷರೆ ಅಲ್ಲಿ ಪಾಪ ಅವರಿಗೆ ವಾರೆಂಟನ್ನು ಇಷ್ಯೂ ಮಾಡುವ ಸ್ಟೇಜಿಗೆ ಬಂದಿದೆ. ಅವರುಗಳು ಊರನ್ನು ಬಿಟ್ಟು ಹೋಗಬೇಕಾದ ಸ್ಟೇಜಿಗೆ ಬಂದಿರುವುದರಿಂದ ಕಡೇಪಕ್ಷ ಒಂದೆರಡು ತಿಂಗಳೊಳಗಾಗಿ ಇವನ್ನು ಮಾಡಬೇಕು.

ಶ್ರೀ ಧರ್ಮಸಿಂಗ್ : ಇದನ್ನು ನಾವು ಎಕ್ಸ್‌ಪೆಕ್ಟೇಷನ್ ಮಾಡುತ್ತಿದ್ದೇವೆ.

ಶ್ರೀ ಸಿ. ಬೈರೇಗೌಡ : ಅಧ್ಯಕ್ಷರೆ ಈ ಘಟನೆ ನಡೆದು ಒಂದು ವರ್ಷವಾಗಿದೆ. ಅನೇಕ ಅಮಾಯಕರು ಇದರಲ್ಲಿದ್ದಾರೆ. ಆ ಅಮಾಯಕರಿಗೆ ರಕ್ಷಣೆ ಕೊಡತಕ್ಕದ್ದು ಸರ್ಕಾರದ ಕರ್ತವ್ಯ ಕೊನೆಯಪಕ್ಷ ತಾವು ಅದನ್ನು ಲಾಂಗ್ ಅಡ್ಜರ್ನಮೆಂಟ್ ಆದರೂ ತೆಗೆದುಕೊಳ್ಳಲು ಪಬ್ಲಿಕ್ ಪ್ರಾಸಿಕ್ಯುಟರ್‌ಗೆ ಹೇಳಿ. ಇವರಿಗೆ ಆಗಿರತಕ್ಕ ತೊಂದರೆಯನ್ನು ನಿವಾರಿಸತಕ್ಕದ್ದು ಒಂದು. ಅತೀ ಜಾಗ್ರತೆಯಾಗಿ ಕ್ಯಾಬಿನೆಟ್ ಸಬ್ ಕಮಿಟಿಯು ತೀರ್ಮಾನವನ್ನು, ನಿರ್ಣಯವನ್ನು ತೆಗೆದುಕೊಳ್ಳುವುದು ಅವಶ್ಯಕ. ಇದರ ಬಗ್ಗೆ ದಯಮಾಡಿ ಗಮನವನ್ನು ಕೊಡಬೇಕೆಂದು ಅಧ್ಯಕ್ಷರ ಮೂಲಕ ತಮ್ಮಲ್ಲಿ ವಿನಂತಿಸುತ್ತೇನೆ.

ಶ್ರೀ ಧರ್ಮಸಿಂಗ್ : ಅಧ್ಯಕ್ಷರೆ ಈಗಾಗಲೇ ವಿತ್‌ಡ್ರಾ ಮಾಡುತ್ತೇವೆಂದು ಆದೇಶವನ್ನು ಕೊಟ್ಟಿದ್ದೇವೆ. ಹೆರ್ಯಾಸ್‌ಮೆಂಟ್ ಮಾಡಬಾರದು ಮತ್ತು ಪಬ್ಲಿಕ್ ಪ್ರಾಸಿಕ್ಯೂಟರ್ ಸಮಯವನ್ನು ತೆಗೆದುಕೊಳ್ಳಬಾರದೆಂದು ಹೇಳಿದ್ದೇವೆ. ಈಗಾಗಲೇ ನಮ್ಮಲ್ಲಿರತಕ್ಕ ಕೇಸ್‌ಗಳ ಸಂಖ್ಯೆ 1049 ಅವುಗಳೆಲ್ಲವನ್ನು ಪ್ರೊಸೆಸ್ ಮಾಡಿ ಶೀಘ್ರದಲ್ಲಿ

ಒಂದೆರಡು ತಿಂಗಳೊಳಗಾಗಿ ಈ ಕೆಲಸಗಳನ್ನು ವಾಪಸ್ ತೆಗೆದುಕೊಳ್ಳಲು ಪ್ರಯತ್ನ ಮಾಡುತ್ತೇವೆ.

ಶ್ರೀ ಎಸ್. ಬಂಗಾರಪ್ಪ : ಇದಕ್ಕೆ ಮಂತ್ರಿಗಳು ಸಮಯವನ್ನು ಕೇಳಿದ್ದಾರೆ.

ಪ್ರಶ್ನೆಯ ಸಂಖ್ಯೆ 2404ಕ್ಕೆ

ಅಧ್ಯಕ್ಷರು : ಆಯಿತು

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಪರಿಶೋಧಿತ ಲೆಕ್ಕ ಪತ್ರಗಳನ್ನು ಮಂಡಿಸುವಲ್ಲಿ ವಿಳಂಬ

2110 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಕಳೆದ 10 ವರ್ಷಗಳಿಂದ ತನ್ನ ಲೆಕ್ಕ ಪತ್ರಗಳನ್ನು ವಿಧಾನ ಮಂಡಲದ ಮುಂದೆ ಸಲ್ಲಿಸಿರುವುದಿಲ್ಲ ಎಂಬುದು ನಿಜವೇ?

ಆ) ಇದು ನಿಜವಾದಲ್ಲಿ, ಇದಕ್ಕೆ ಕಾರಣಗಳು ಏನು?

ಇ) ಈ ಲೆಕ್ಕಪತ್ರಗಳನ್ನು ಯಾವಾಗ ವಿಧಾನ ಮಂಡಲದ ಮುಂದೆ ಸಲ್ಲಿಸಲಾಗುವುದು?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ತಿದ್ದುಪಡಿ ಕಾಯಿದೆ 1976ರ ಕಲಂ 47(5)ರಂತೆ ತನ್ನ ಲೆಕ್ಕ ಪತ್ರಗಳನ್ನು ವಿಧಾನ ಮಂಡಲದ ಮುಂದೆ ದಿನಾಂಕ 1.4.1984ರಿಂದ ಸಲ್ಲಿಸಲು ನಮೂದಿಸಿದೆ. ಅದರಂತೆ, 1983-84 ರಿಂದ 1986-87 ರವರೆಗೆ ಲೆಕ್ಕ ಪತ್ರಗಳನ್ನು ವಿಧಾನ ಮಂಡಲದ ಕಾರ್ಯಾಲಯಕ್ಕೆ ಈಗಾಗಲೇ ಕಳುಹಿಸಿ ಕೊಡಲಾಗಿದೆ. 1987-88 ಮತ್ತು 1988-89ರ ಲೆಕ್ಕಪತ್ರಗಳು ಸಿದ್ಧವಾಗಿದ್ದು ಮಹಾಲೇಖಪಾಲಕರಿಂದ ಲೆಕ್ಕ ತನಿಖೆ ನಡೆಯುತ್ತಿದೆ. ಇದು ಮುಗಿದ ತಕ್ಷಣವೇ ವಿಧಾನ ಮಂಡಲದ ಕಾರ್ಯಾಲಯಕ್ಕೆ ಕಳುಹಿಸಿ ಕೊಡಲಾಗುವುದು.

1989-90 ಮತ್ತು 1990-91ರ ಲೆಕ್ಕ ಪತ್ರಗಳು ಪೂರ್ಣ ಮಾಡಲಾಗುತ್ತಿದೆ.

ಆ) 1983-84ರಿಂದ ಮುಂದೆ ಲೆಕ್ಕ ಪತ್ರಗಳನ್ನು ವಿಧಾನ ಮಂಡಲದ ಮುಂದೆ ಇಡಲು ಕೆಳಕಂಡ ಕಾರಣಗಳಿಂದ ವಿಳಂಭವಾಗಿದೆ.

1) ಜುಲೈ 79ರಿಂದ ನವೆಂಬರ್ 79ರವರೆಗೆ ಕೆಲವು ನಗದು ಪುಸ್ತಕಗಳು ಮತ್ತು ರಶೀದಿಗಳು ಕಳೆದು ಹೋದುದರಿಂದ ನಂತರದ ವರ್ಷಗಳ ಲೆಕ್ಕ ಪತ್ರಗಳನ್ನು ಪೂರ್ಣ ಮಾಡುವಲ್ಲಿ ತಡವಾಯಿತು.

2) ಹಿಂದಿನ ವರ್ಷಗಳ ಪ್ರಾರಂಭಿಕ ಹಾಗೂ ಮುಕ್ತಾಯದ ಶಿಲ್ಕುಗಳ ವಿವರ ಸಿಗದೇ ಇದ್ದುದರಿಂದಲೂ, ಲೆಕ್ಕಪತ್ರಗಳನ್ನು ಪೂರ್ಣ ಮಾಡಲು ಆಗಲಿಲ್ಲ.

3) ಲೆಕ್ಕ ತನಿಖೆ ಆದ ಮೇಲೆ ಲೆಕ್ಕಪತ್ರಗಳನ್ನು ಕಂಟ್ರೋಲರ್ ಮತ್ತು ಆಡಿಟರ್ ಜನರಲ್ ಅವರಿಗೆ ವಹಿಸಿ ವಾಣಿಜ್ಯ ಪದ್ಧತಿಯನ್ನು ಅಳವಡಿಸುವಲ್ಲಿ ಸ್ವಲ್ಪ ವಿಳಂಬವಾಗಿರುತ್ತದೆ.